## ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
### ಕಿತ್ತೂರು ರಾಣಿ ಚನ್ನಮ್ಮಾ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ

---

## ಅಖಿಲ ಭಾರತೀಯ ಸಮನ್ವಯ ಸಂಶೋಧನಾ ಯೋಜನೆ (ಹಣ್ಣುಗಳು), (ICAR – AICRP on Fruits) ಅರಭಾವಿಯಿಂದ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನ

*****

## ಕಡಿಮೆ ಖರ್ಚಿನಲ್ಲಿ ಒಳ್ಳೆಯ ಗುಣಮಟ್ಟದ ಬಾಳೆ ಸಸಿಗಳನ್ನು ಉತ್ಪಾದಿಸುವ ರೈತ ಸ್ನೇಹಿ ತಂತ್ರಜ್ಞಾನ (Macro propagation in Banana):

ಬಾಳೆಯಲ್ಲಿ ಮ್ಯಾಕ್ರೋಪ್ರೊಪಗೇಷನ್ ವಿಧಾನದಿಂದ ರಾಜಾಪುರಿ ಮತ್ತು ಗ್ರ್ಯಾಂಡ್ ನೈನ್ ತಳಿಗಳಲ್ಲಿ ಒಂದು ಬಾಳೆಯ ಗಡ್ಡೆಯಿಂದ ಸುಮಾರು 10 ರಿಂದ 15 ಬಾಳೆ ಸಸಿ (ತರು) ಗಳನ್ನು 4 ರಿಂದ 5 ತಿಂಗಳಲ್ಲಿ ಪಡೆಯಬಹುದು. ಈ ವಿಧಾನವನ್ನು ರೈತರು ಸ್ವತಃ ತಮ್ಮ ಹೊಲದಲ್ಲಿ ಅಳವಡಿಸಿಕೊಂಡು ತಮ್ಮಲ್ಲಿ ಲಭ್ಯತೆ ಇರುವ ಬಾಳೆಗಡ್ಡೆಗಳನ್ನು ಬಳಸಿ ಬಾಳೆ ಮರಿಗಳನ್ನು ಉತ್ಪಾದಿಸಬುದು.

- ರೋಗ ಮತ್ತು ಕೀಟ ರಹಿತ ಆರೋಗ್ಯವಾದ ಕತ್ತಿ ಆಕಾರದ ಕಂದುಗಳನ್ನು ಆಯ್ಕೆ ಮಾಡಿಕೊಳ್ಳಬೇಕು.
- ಕಂದುಗಳನ್ನು ತೆಗೆದುಕೊಂಡ ನಂತರ ಅದರ ಮೇಲಿನ ಚಿಗುರು ಮತ್ತು ಎಲೆಗಳನ್ನು (ಕುತ್ತಿಗೆ ಭಾಗದವರೆಗೂ) ಕತ್ತರಿಸಿ ತಳಭಾಗದ ಬೇರುಗಳನ್ನು ಸಂಪೂರ್ಣ ಸವರಬೇಕು.
- ಗಡ್ಡೆಯ ಮಧ್ಯಭಾಗದಲ್ಲಿ 2 ಸೆಂ. ಮೀ. ಆಳದಷ್ಟು ಮರಿ ಬೆಳೆಯುವ ತುದಿ ಭಾಗವನ್ನು ತೆಗೆದುಹಾಕಬೇಕು.
- ಗಡ್ಡೆಗಳಿಗೆ 6 ರಿಂದ 8 ಅಡ್ಡವಾಗಿ ಸೀಳುಗಳನ್ನು ಕೊಡಬೇಕು.
- ಹೀಗೆ ತಯಾರಿಸಿದ ಗಡ್ಡೆಗಳನ್ನು ಕಾರ್ಬನ್ ಡೈಜಿಮ್ 50 ಡಬ್ಲ್ಯೂ. ಪಿ ಶೀಲಿಂದ್ರ ನಾಶಕವನ್ನು ಪ್ರತಿ ಲೀಟರ್ ನೀರಿಗೆ 1.0 ಗ್ರಾಂ. ಮಿಶ್ರಣ ಮಾಡಿದ ದ್ರಾವಣದಲ್ಲಿ 5 ರಿಂದ 10 ನಿಮಿಷಗಳವರೆಗೆ ಅದ್ದಿ ಇಡಬೇಕು.
- ಈ ರೀತಿಯಾಗಿ ತಯಾರಿಸಿದ ಗಡ್ಡೆಗಳನ್ನು ಪಾಲಿಥಿನ್ ಚೀಲದಲ್ಲಿ (50 x 45 ಸೆಂ. ಮೀ.) ಕಟ್ಟಿಗೆ ಹೊಟ್ಟು (3 ಕಿ. ಗ್ರಾಂ.) ಅಣುಜೀವಿ ಗೊಬ್ಬರ (ಟ್ರೈಕೋಡರ್ಮಾ ಹಾರ್ಜಿಯಾನಮ್ @ 30 ಗ್ರಾಂ. ಮತ್ತು ವ್ಯಾಮ್ @ 30 ಗ್ರಾಂ.) ಹಾಕಿ ನಾಟಿ ಮಾಡಬೇಕು.
- ಹೀಗೆ ಉಪಚರಿಸಿದ ಗಡ್ಡೆಗಳಿಂದ 20 ರಿಂದ 25 ದಿನದೊಳಗೆ 4 ರಿಂದ 5 ಪ್ರಥಮ ಹಂತದ 2 ರಿಂದ 3 ಎಲೆಗಳ ಮರಿಗಳು ಬರುತ್ತವೆ.
- ಈ ಪ್ರಥಮ ಹಂತದ ಮರಿಗಳನ್ನು ಕತ್ತರಿಸಿ ಗಡ್ಡೆಯ ತುದಿ ಭಾಗವನ್ನು ತೆಗೆದು, ಆ ಗಡ್ಡೆಗೆ ಪುನಃ 4 ಅಡ್ಡವಾಗಿ ಸೀಳುಗಳನ್ನು ಕೊಡಬೇಕು.

- ಈ ರೀತಿ ಮಾಡಿದ ಗಡ್ಡೆಗಳಿಂದ 20 ರಿಂದ 25 ದಿನದೊಳಗೆ 6 ರಿಂದ 8 ದ್ವಿತೀಯ ಹಂತದ 2 ರಿಂದ 3 ಎಲೆಗಳಿರುವ ಮರಿಗಳು ಬರುತ್ತವೆ.
- ಈ ದ್ವಿತಿಯ ಹಂತದ ಮರಿಗಳನ್ನು ಪುನಃ ಕತ್ತರಿಸಿ ಗಡ್ಡೆಯ ತುದಿ ಭಾಗವನ್ನು ತೆಗೆದು, ಆ ಗಡ್ಡೆಗೆ ಪುನಃ 4 ಅಡ್ಡವಾಗಿ ಸೀಳುಗಳನ್ನು ಕೊಡಬೇಕು.
- ಈ ರೀತಿ ಮಾಡಿದ ಗಡ್ಡೆಗಳಿಂದ 20 ರಿಂದ 25 ದಿನದೊಳಗೆ 10 ರಿಂದ 15 ತೃತೀಯ ಹಂತದ 2 ರಿಂದ 3 ಎಲೆಗಳಿರುವ ಮರಿಗಳು ಬರುತ್ತವೆ.
- ಈ ಮರಿಗಳನ್ನು ಒಂದೊಂದಾಗಿ ಬಿಡಿಸಿ ಫಾಲಿಥಿನ್ ಚೀಲದಲ್ಲಿ (5 x 8 ಇಂಚು) 1:1:1 ಪ್ರಮಾಣದಲ್ಲಿ (ಮಣ್ಣು : ಚೆನ್ನಾಗಿ ಕಳೆತಿರುವ ತಿಪ್ಪೆಗೊಬ್ಬರ : ಮರಳು) ಮಿಶ್ರಣ ಮಾಡಿಕೊಂಡು ತೃತೀಯ ಹಂತದ ಮರಿಗಳನ್ನು ನಾಟಿ ಮಾಡಬೇಕು.
- ಹೀಗೆ ತೃತೀಯ ಹಂತದ ಮರಿಗಳನ್ನು ಪಾಲಿಥೀನ್ ಚೀಲದಲ್ಲಿ (5 x 8 ಇಂಚು) ಹಾಕಿದ ನಂತರ ಸರಾಸರಿ 30 ರಿಂದ 35 ದಿನದೊಳಗೆ ಬಾಳೆ ಸಸಿಗಳು (ತರುಗಳು) ಹೊಲದಲ್ಲಿ ನಾಟಿ ಮಾಡಲು ಸಿದ್ಧವಾಗುತ್ತವೆ.